ಕೃಷಿ ಹಣಕಾಸು ನಿಗಮ ಸ್ಥಾಪನೆ

172 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಉಪ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರೈತರ ಹಿತವನ್ನು ಕಾಪಾಡಲು ಕೃಷಿ ಹಣಕಾಸು ನಿಗಮ ಸ್ಥಾಪಿಸಲು ಸರ್ಕಾರವು ಉದ್ದೇಶಿಸಿದೆಯೆ?*

ಆ) *ಈ ನಿಗಮ ಸ್ಥಾಪನೆಗೆ ಎಷ್ಟು ಬಂಡವಾಳವನ್ನು ಸರ್ಕಾರ ಮಾಡಲಾಗುತ್ತಿದೆ?*

ಇ) *ನಿಗಮ ಸ್ಥಾಪನೆ ಕಾರ್ಯ ಎಂದಿನಿಂದ ಪ್ರಾರಂಭವಾಗಲಿದೆ.*

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :

ಅ) ಹೌದು.

ಆ) 2.00 ಕೋಟಿ ರೂ.ಗಳು

ಇ) ಕರ್ನಾಟಕ ಸರ್ಕಾರದ ವಿತ್ತ ಕಂಪನಿಯನ್ನು ದಿನಾಂಕ : 25-02-97 ರಂದು ನೊಂದಾಯಿಸಲಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಅಧ್ಯಕ್ಷರೆ, ನಾನು ರೈತರ ಹಿತವನ್ನು ಕಾಪಾಡಲು ಕೃಷಿ ಹಣಕಾಸು ನಿಗಮ ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆಯೇ ಎಂದು ಕೇಳಿದ್ದೆ. ಅದಕ್ಕೆ 'ಹೌದು' ಎಂದು ಉತ್ತರ ಇದೆ. ಈ ನಿಗಮ ಸ್ಥಾಪಿಸಲು ಎಷ್ಟು ಬಂಡವಾಳವನ್ನು ಸರ್ಕಾರ ಹೂಡುತ್ತಿದೆ ಎಂಬ ಪ್ರಶ್ನೆಗೆ ಎರಡು ಕೋಟಿ ರೂಪಾಯಿ ಎಂದು ಉತ್ತರ ಬಂದಿದೆ. ಆದರೆ ನಿಮಗೆ ಸ್ಥಾಪನೆ ಕಾರ್ಯ ಎಂದಿನಿಂದ ಪ್ರಾರಂಭವಾಗಲಿದೆ ಎಂಬ ನನ್ನ ಪ್ರಶ್ನೆಗೆ ಅವರು ಕೊಟ್ಟಿರತಕ್ಕ ಉತ್ತರ ಕರ್ನಾಟಕ ಸರ್ಕಾರದ ವಿತ್ತ ಕಂಪನಿಯನ್ನು 25-2-97 ರಂದು ನೊಂದಾಯಿಸಲಾಗಿದೆ ಎಂದು ಹೇಳಿದ್ದಾರೆ. ನಾನು ಕೇಳಿರತಕ್ಕ ಪ್ರಶ್ನೆ ಯಾವತ್ತಿನಿಂದ ಪ್ರಾರಂಭವಾಗುತ್ತದೆ ಎಂದು ನಾನು ಕೇಳಿರತಕ್ಕ ಪ್ರಶ್ನಗೆ ನೋಂದಾಯಿಸಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಸ್ಪಷ್ಟವಾಗಿ ನಾನು ಕೇಳುತ್ತಿದ್ದೇನೆ, ಒಂದು ನಾನು ಕೇಳಿರತಕ್ಕದ್ದು ರೈತರ ಹಿತವನ್ನು ಕಾಪಾಡಲು ಕೃಷಿ ಹಣಕಾಸು ನಿಗಮ ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆಯೇ ಎಂದು. ಇಲ್ಲಿ ಕಂಪನಿಯನ್ನು ನೊಂದಾಯಿಸಲಾಗಿದೆ ಎಂಬ ಉತ್ತರವನ್ನು ಕೊಟ್ಟಿದ್ದಾರೆ. ಇದಕ್ಕೆ ಸ್ವಲ್ಪ ವಿವರಣೆ ಬೇಕಾಗುತ್ತದೆ. ಕಂಪನಿ ಮತ್ತು ನಿಗಮಕ್ಕೆ ಇರತಕ್ಕಂಥ ವ್ಯತ್ಯಾಸದಲ್ಲಿ ನೀವು ರೈತರಿಗೆ ಅನುಕೂಲ ಆಗತಕ್ಕಂಥ ರೀತಿಯಲ್ಲಿ ಯಾವಯಾವ ಕಂಪನಿಗಳಾದರೆ ಯಾವ ಯಾವ ನಿಯಮಗಳು ಬರುತ್ತವೆ, ನಿಗಮ ಆದರೆ ಯಾವಯಾವ ನಿಯಮಗಳನ್ನು ಅಳವಡಿಸಬೇಕಾಗುತ್ತದೆ, ನಿಗಮದಲ್ಲಿರತಕ್ಕ ನಿಯಮಾವಳಿ ಪ್ರಕಾರ ರೈತರಿಗೆ ಅನುಕೂಲ ಹೆಚ್ಚಿಗೆ ಆಗುತ್ತದೆಯೇ? ಕಂಪನಿಗೆ ಸಂಬಂಧಪಟ್ಟ ನಿಯಮಾವಳಿ ಪ್ರಕಾರ ರೈತರಿಗೆ ಹೆಚ್ಚಿಗೆ ಅನುಕೂಲವಾಗುತ್ತದೆಯೇ? ಏಕೆ ನಿಗಮವನ್ನು ಕೈಬಿಟ್ಟು ಕಂಪನಿ ಎಂದು ರಿಜಿಸ್ಟರ್ ಮಾಡಿಸಿದ್ದಾರೆ? ಇವುಗಳಿಗೆ ಸ್ಪಷ್ಟವಾದ ಉತ್ತರವನ್ನು ಕೇಳಬಯಸುತ್ತಾ ಇದ್ದೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಉಪಾಧ್ಯಕ್ಷರೆ, ಹೊಸ ಕೃಷಿ ನೀತಿ ನಾವು ಏನು ರಾಜ್ಯದಲ್ಲಿ ತಂದಿದ್ದೇವೆ, ಅದರ ಶಿಫಾರಸ್ಸಿನ ಅನುಗುಣವಾಗಿ ಒಂದು ಕರ್ನಾಟಕ ಫೈನಾನ್ಸ್ ಕಾರ್ಪೊರೇಷನ್ ಮಾದರಿಯಲ್ಲಿ ಕರ್ನಾಟಕ ಅಗ್ರಿಕಲ್ಚರ್ ಫೈನಾನ್ಸ್ ಕಾರ್ಪೊರೇಷನ್ ಎಂದು ಮಾಡಬೇಕೆಂದು ನಾವು ವಿಚಾರ ಮಾಡಿದ್ದೆವು. ಅದರ ಬಗ್ಗೆ ಅಧ್ಯಯನ ಮಾಡಿ ಒಂದು ವರದಿ ಕೊಡಲಿಕ್ಕೋಸ್ಕರ ನನ್ನ ಅಧ್ಯಕ್ಷತೆಯಲ್ಲೇ ಸಚಿವಸಂಪುಟದ ಉಪಸಮಿತಿಯೊಂದು ರಚನೆಯಾಗಿತ್ತು. ನಾವು ಈ ಬಗ್ಗೆ ಚರ್ಚೆ ಮಾಡುವ ಸಂದರ್ಭದಲ್ಲಿ ಮತ್ತು ಅದಕ್ಕೆ ಅಂತಿಮ ರೂಪ ಕೊಡುವುದಕ್ಕೆ ಮುಂಚಿತವಾಗಿ 1996-97ನೇ ಸಾಲಿನ ಬಜೆಟ್‌ನಲ್ಲಿ ಕೇಂದ್ರಸರ್ಕಾರದವರು ಎಲ್ಲಾ ರಾಜ್ಯಗಳಲ್ಲಿ ಈ ತರಹ ಒಂದೊಂದು ಕೃಷಿ ಮಾಡತಕ್ಕದ್ದು, ಹೈಟೆಕ್ ಮತ್ತು ದೊಡ್ಡ ಮಟ್ಟದ ತಂತ್ರಜ್ಞಾನವನ್ನು ಇದೆಲ್ಲಾ ಬಳಸಿಕೊಳ್ಳತಕ್ಕಂಥ ದೊಡ್ಡ ರೈತರಿಗೆ ಮತ್ತು ಹೈಟೆಕ್ ಅಳವಡಿಸತಕ್ಕಂಥವರಿಗೆ ಈ ತರಹ ಬ್ಯಾಂಕ ಮಾಡುವುದರಿಂದ ಅನುಕೂಲ ವಾಗುತ್ತದೆ ಎಂದು ಯೋಚನೆ ಮಾಡಿದ್ದೇವೆ. ಮತ್ತೆ ಸಣ್ಣಹಿಡುವಳಿದಾರರು, ಅತಿ ಸಣ್ಣ ಹಿಡುವಳಿದಾರರು ಇವರಿಗೆ ಸಾಲ ಸೌಲಭ್ಯಗಳನ್ನು ಒದಗಿಸುವುದಕ್ಕೆ ಬಹಳ ತೊಂದರೆಯಾಗುತ್ತದೆ. ಸ್ವಲ್ಪ ಹೆಚ್ಚು ಜಮೀನು ಇರತಕ್ಕಂಥವರಿಗೆ ಸಾಲಸೌಲಭ್ಯಕ್ಕೆ ಅನುಕೂಲವಾಗುತ್ತದೆ ಎನ್ನುವುದನ್ನು ವಿಚಾರ ಮಾಡಿ ಅದೇ ಸಂದರ್ಭದಲ್ಲಿ ಕರ್ನಾಟಕ, ತಮಿಳುನಾಡು ಮತ್ತೆ ಆಂಧ್ರ ಈ ಮೂರು ರಾಜ್ಯಗಳಲ್ಲಿ ಕಾರ್ಪೊರೇಷನ್ ಬದಲು ಕೃಷಿ ಅಭಿವೃದ್ಧಿ ಕಂಪನಿ ಲಿಮಿಟೆಡ್ ಎಂದು ನಬಾರ್ಡ್‌ನವರ ಸಲಹೆಯಂತೆ ಮಾಡಿದ್ದಾರೆ. ಮೂರು ಕಡೆ ರಿಜಿಸ್ಟರ್ ಆಗಿವೆ. ತಮಿಳುನಾಡಿನಲ್ಲಿ ಒಂದಾಗಿದೆ, ಕರ್ನಾಟಕದಲ್ಲಿ ಒಂದಾಗಿದೆ, ಮತ್ತು ಆಂಧ್ರದಲ್ಲಿ ಒಂದಾಗಿದೆ. ಇದರಲ್ಲಿ ನಬಾರ್ಡ್‌ನವರು, ರಾಜ್ಯ ಸರ್ಕಾರದವರು, ಮತ್ತೆ ಖಾಸಗಿಯವರು ಎನ್.ಆರ್.ಐ.ಗಳೂ ಕೂಡ ಬಂಡವಾಳ ಹೂಡಿಕೆ ಆಗಬಹುದು ಎನ್ನತಕ್ಕದ್ದನ್ನು ಗಮನದಲ್ಲಿಟ್ಟುಕೊಂಡು ಮಾಡಿದ್ದಾರೆ. ಅದನ್ನು ಯಾವ ಸೂತ್ರದಲ್ಲಿ ಮಾಡಿದ್ದಾರೆ ಅಂದರೆ ನಬಾರ್ಡ್ 26 ಪರ್ಸೆಂಟ್ ರಾಜ್ಯ ಸರ್ಕಾರ 19 ಪರ್ಸೆಂಟ್ ಮತ್ತೆ ಖಾಸಗಿಯವರು 55 ಪರ್ಸೆಂಟ್ ಈ ರೀತಿಯಲ್ಲಿ ಮಾಡಿ ಈಗಾಗಲೇ ರಿಜಿಸ್ಟರ್ ಆಗಿ ನಮ್ಮದು ಪಾಲು ಎರಡು ಕೋಟಿ ರೂಪಾಯಿಗಳನ್ನು ಈಗಾಗಲೇ ಮಾಡಿದ್ದೇವೆ. ನೋಂದಾವಣೆ ಕೂಡ ಆಗಿದೆ. ಮತ್ತೆ ನಬಾರ್ಡ್‌ನವರು ನಮಗೆ ನಿರ್ದೇಶಕರ ಮಂಡಳಿ ಮತ್ತು ಅಧ್ಯಕ್ಷತೆ ವಿಷಯದಲ್ಲಿ ಪಾಲ್ಗೊಳ್ಳುವುದಕ್ಕೆ ಆಹ್ವಾನವನ್ನೂ ಕೂಡ ನೀಡಿದ್ದಾರೆ. ಆದ್ದರಿಂದ ಅದನ್ನು ಈಗ ಕೈಬಿಟ್ಟಿವು. ಕಾರ್ಪೊರೇಷನ್ ಮಾಡಬೇಕೆಂದು ಮೊದಲು ಯೋಚನೆ ಮಾಡಿದ್ದೆವು. ಅದಕ್ಕಿಂತ ಇದು ಹೆಚ್ಚು ಅನುಕೂಲವಾಗುತ್ತದೆಂದು ಇದನ್ನು ಮಾಡಿ ಈಗಾಗಲೇ ಇದು ನೋಂದಾವಣೆ ಆಗಿದೆ. ಮತ್ತೆ ಪ್ರಾರಂಭ ಮಾಡಲಿಕ್ಕೆ ಎಲ್ಲಾ ವ್ಯವಸ್ಥೆ ಆಗುತ್ತಿದೆ. ಪೂರ್ವಭಾವಿ ಸಿದ್ಧತೆಗಳೆಲ್ಲಾ ಮುಗಿಸಿದಮೇಲೆ, ಈಕ್ವಿಟಿ ಷೇರ್ಸ್ ಎಲ್ಲಾ ಹಾಕಿದಮೇಲೆ ಕೆಲಸ ಪ್ರಾರಂಭ ಮಾಡಲಿಕ್ಕೆ ಆಗುತ್ತದೆಂದು ಮಾನ್ಯ ಸದಸ್ಯರಿಗೆ ತಿಳಿಸಲಿಕ್ಕೆ ತಿಳಿಸಬಯಸುತ್ತೇನೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಉಪಾಧ್ಯಕ್ಷರೆ, ಇಲ್ಲಿ ಕಂಪನಿ ಮತ್ತು ನಿಗಮಗಳ ನಿಯಮಾವಳಿಯಲ್ಲಿ ವ್ಯತ್ಯಾಸ ಇದೆಯೇ ಎಂದು ನಾನು ಕೇಳಿದ್ದೆ. ಏಕೆಂದರೆ ಕಂಪನಿ ಎಂದರೆ ಇದರಲ್ಲಿ ಯಾರು ಬೇಕಾದರೂ ಬಂಡವಾಳ ಹಾಕಬಹುದು, ವಿದೇಶೀಯರೂ ಹಾಕಬಹುದು, ಸ್ವದೇಶಿಯವರೂ ಹಾಕಬಹುದು,

ಖಾಸಗಿಯವರು ಹಾಕಬಹುದು, ಸರ್ಕಾರ ಹಾಕಬಹುದು. ಆ ಕಂಪನಿಯಲ್ಲಿ ಬಂದಂಥ ಲಾಭಗಳು ಬೇರೆ ಬೇರೆಯವರಿಗೆಲ್ಲಾ ಹೋಗುತ್ತದೆ. ಕರ್ನಾಟಕ ಸ್ಟೇಟ್ ಫೈನಾನ್ಸ್ ಕಾರ್ಪೊರೇಷನ್ ಇದೆ. ಇದು ಸಂಪೂರ್ಣವಾಗಿ ರಾಜ್ಯಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರತಕ್ಕ ಸಂಸ್ಥೆ. ಅದರಲ್ಲಿ ಹಲವಾರು ಬಾಬುಗಳಿಗೆ ಸಾಲ ಸೌಲಭ್ಯವನ್ನು ಒದಗಿಸಲಾಗುತ್ತದೆ. ಅದೇ ರೀತಿ ಕೃಷಿ ಹಣಕಾಸು ನಿಗಮ ಸ್ಥಾಪಿಸತಕ್ಕ ಉದ್ದೇಶ ಕೂಡ ಬಹುಶಃ ಏನಾಗಿರಬೇಕು ಎನ್ನತಕ್ಕದ್ದರ ಬಗ್ಗೆ ಸ್ಪಷ್ಟವಾದಂಥ ಒಂದು ನೀತಿ ಇರಬೇಕಾಗುತ್ತದೆ. ಕೃಷಿ ಅಭಿವೃದ್ಧಿಗೆ ಸಾಲ ಕೊಡತಕ್ಕದ್ದು ಒಂದು ದೃಷ್ಟಿಯಾದರೆ, ಕೃಷಿ ಉತ್ಪನ್ನಗಳನ್ನು ಮಾರುಕಟ್ಟೆಯಲ್ಲಿ ಕೊಂಡುಕೊಳ್ಳತಕ್ಕ, ಕೃಷಿ ಉತ್ಪನ್ನಗಳ ಮಾರ್ಕೆಟ್ಟಿನಲ್ಲಿ ಸರ್ಕಾರ ಅಥವಾ ಇವರು ಸ್ಥಾಪನೆ ಮಾಡತಕ್ಕಂಥ ನಿಗಮ ಅಥವಾ ಕಂಪನಿ ಮಧ್ಯಪ್ರವೇಶ ಮಾಡಿ ರೈತರು ಉತ್ಪಾದನೆ ಮಾಡಿದಂಥ ಆ ಸರಕುಗಳನ್ನು ಕೊಂಡುಕೊಳ್ಳತಕ್ಕ ವ್ಯವಸ್ಥೆಗೆ ಈ ಕಂಪನಿ ನಿಯಮಾವಳಿಗಳು ಒಳಪಟ್ಟಿದೆಯೇ ಅಥವಾ ಬರೀ ಹೈಟೆಕ್ ರೈತರಿಗೆ, ದೊಡ್ಡದೊಡ್ಡ ಜಮೀನುದಾರರಿಗೆ ಶ್ರೀಮಂತ ರೈತರಿಗೆ ಸಾಲಸೌಲಭ್ಯಗಳನ್ನು ಒದಗಿಸುವುದಕ್ಕಷ್ಟೇ ಇದು ಸೀಮಿತವಾಗುತ್ತದೆಯೇ? ಆ ರೀತಿ ಸೀಮಿತ ಆದರೆ ನಿಜವಾಗಿ ಕೃಷಿ ರಂಗದಲ್ಲಿ ಪಾಲ್ಗೊಳ್ಳತಕ್ಕ ಎಲ್ಲಾ ಕೃಷಿಕರಿಗೆ ಸಹಾಯವಾಗುವುದಿಲ್ಲ. ಅದನ್ನು ಸ್ಪಷ್ಟಪಡಿಸಬೇಕು ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : ಉಪಾಧ್ಯಕ್ಷರೇ, ಈಗಾಗಲೇ ನಾನು ಹೇಳಿದ್ದೇನೆ. ಕರ್ನಾಟಕ ಸ್ಟೇಟ್ ಫೈನಾನ್ಸ್ ಕಾರ್ಪೊರೇಷನ್ ಎಂದು ಮಾಡಿದರೆ ಹೆಚ್ಚು ಜಮೀನಿರತಕ್ಕವರಿಗೆ ಅನುಕೂಲವಾಗುತ್ತದೆ ಎನ್ನುವ ಕಾರಣಕ್ಕೋಸ್ಕರವೇ ಸಣ್ಣ ಹಿಡುವಳಿದಾರರಿಗೆ ಸಾಲ ಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕೆ ಕಷ್ಟವಾಗುತ್ತಿತ್ತು. ಈಗ ಕಂಪನಿ ಮಾಡುವುದರಿಂದ ಹೆಚ್ಚು ಫ್ಲೆಕ್ಸಿಬಲಿಟಿ ಇದೆ. ಬ್ಯಾಂಕ್ ಆಕ್ಟಿವಿಟೀಸ್ ಏನಿದೆ ಹಾಗೆ ವಿಸ್ತಾರವಾಗಿ ಇದೆ. ಹೆಚ್ಚು ಸಣ್ಣ ಹಿಡುವಳಿದಾರರಿಗೆ ಅನುಕೂಲವಾಗುವಂಥದ್ದು. ಆ ಕಾರಣದಿಂದಲೇ ನಬಾರ್ಡ್‌ನವರು ಇದನ್ನು ಮಾಡುವುದರಿಂದ ಹೆಚ್ಚು ಅನುಕೂಲವಾಗುತ್ತದೆ ಎಂದು ಸಲಹೆ ಮಾಡಿರುವುದರಿಂದ ನಾವು ಇದನ್ನು ಈಗ ಒಪ್ಪಿಕೊಂಡಿದ್ದೇವೆ. ಫೈನಾನ್ಸ್ ಕಾರ್ಪೊರೇಷನ್ ಕೈಬಿಟ್ಟಿದ್ದೇವೆ. ಸಣ್ಣ ಹಿಡುವಳಿದಾರರ ಬಗ್ಗೆ ನೀವು ಏನೇನು ಹೇಳಿದ್ದೀರಿ ಬೆಳೆ ಸಾಲ ಕೊಡತಕ್ಕದ್ದು, ಕೃಷಿ ಅಭಿವೃದ್ಧಿ ಮಾಡತಕ್ಕದ್ದು, ಮಾರ್ಕೆಟಿಂಗ್ ಮಾಡತಕ್ಕದ್ದು, ರಿಸರ್ಚ್ ಮಾಡತಕ್ಕದ್ದು ಇದೆಲ್ಲದಕ್ಕೂ ಕಂಪನಿ ಮಾಡುವುದರಿಂದ ಅನುಕೂಲವಾಗುತ್ತದೆ. ಆದ್ದರಿಂದ ಇದನ್ನು ನಾವು ಮಾಡಲಿಕ್ಕೆ ಹೊರಟಿದ್ದೇವೆ.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 24-3-97ನೇ ದಿನಾಂಕದ 13ನೇ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಪಟ್ಟಿಗಳಲ್ಲಿರುವ 147 ಪ್ರಶ್ನೆಗಳ ಪೈಕಿ 100 ಪ್ರಶ್ನೆಗಳ ಉತ್ತರಗಳನ್ನು ಸದನದ ಮುಂದೆ ಇಡುತ್ತಿದ್ದೇನೆ.